Code No. **08 X(A)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜನವರಿ, 2019

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :*** 1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.

2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.

3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಈ ಜಗತ್ತಿನಲ್ಲಿ ಒಬ್ಬ ಚತುರನಾದ ಹಸ್ತಶಿಲ್ಪಿ ಇದ್ದರೆ, ಆತನ ಹಸ್ತ ಕೌಶಲದಿಂದ ತಯಾರಾದ ವಸ್ತುಗಳನ್ನು ಉಪಕರಣಗಳನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಾರೆ ಮತ್ತು ಖರೀದಿಸುತ್ತಾರೆ. ಆದರೆ ಕೆಲವರು ವ್ಯಾಪಾರದ ದೃಷ್ಟಿಕೋನದಿಂದ ಇಂತಹ ಹಸ್ತ ಶಿಲ್ಪಿಗಳ ಹಸ್ತ ಕೌಶಲದಿಂದ ಆರ್ಥಿಕ ಲಾಭವನ್ನು ಪಡೆಯಲು ಯತ್ನಿಸುವವರೂ ಇದ್ದಾರೆ. ಇಂತಹ ಸ್ವಾರ್ಥಿಗಳಿಗೆ ಸೂಕ್ತ ಪಾಠ ಕಲಿಸಲೆತ್ನಿಸಿದ ಒಬ್ಬ ಕಮ್ಮಾರನ ಪ್ರಸಂಗ ಗಮನಾರ್ಹವಾಗಿದೆ. ಒಂದು ಗ್ರಾಮದಲ್ಲಿ ಬಡಗಿ ಒಮ್ಮೆ ಪಕ್ಕದ ಹಳ್ಳಿಗೆ ಮರದ ಕೆಲಸಕ್ಕೆಂದು ಹೋಗಿದ್ದನು, ಆಗ ತನಗೆ ಬೇಕಾದ ಉಪಕರಣಗಳನ್ನು ತಂದಿದ್ದರೂ ಕಬ್ಬಿಣದ ಸುತ್ತಿಗೆಯನ್ನು ಒಯ್ಯಲು ಮರೆತು ಬಿಟ್ಟಿದ್ದನು. ಆಗ ಅದೇ ಹಳ್ಳಿಯ ಕಮ್ಮಾರನ ಬಳಿ ವಿಂತಿಸಿಕೊಂಡನು ನಾನು ಸುತ್ತಿಗ ತರಲು ಮರೆತು ಬಿಟ್ಟಿದ್ದೇನೆ, ನನಗಾಗಿ ಒಂದು ಒಳ್ಳೆಯ ಸುತ್ತಿಗೆ ತಯಾರಿಸಿ ಕೊಡುತ್ತಿಯಾ, ಆಗ ಕಮ್ಮಾರನು ಉತ್ತರಿಸಿದ ಮಾಡಿಕೊಡುತ್ತೇನೆ. ಸದ್ಯ ಕಬ್ಬಿಣವು, ಪಟ್ಟಣದಿಂದ ಬರಬೇಕಾಗಿದೆಯಷ್ಟೆ, ತಾವುಗಳು ಎರಡು ದಿನ ಕಾಯಬೇಕಾಗುತ್ತದೆ ಎಂದನು. ಹಾಗೇ ಹಿಂತಿರುಗಿದ ಬಡಗಿಗೆ ಮಾರನೇ ದಿನ ಸುಂದರವಾದ ಸುತ್ತಿಗೆ ಸಿಕ್ಕಿ ಸಂತಸವಾಯಿತು. ಕಮ್ಮಾರನು ಒಂದು ಒಳ್ಳೆಯ ಸುತ್ತಿಗೆಯನ್ನು ಮಾಡಿ ಇಟ್ಟು ಅದನ್ನು ಬಡಗಿಗೆ ನೀಡಿದನು. ಇದರಿಂದ ಬಡಗಿಗೆ ತುಂಬಾ ಸಂತೋಷವಾಯಿತು, ಏಕೆಂದರೆ ಸುತ್ತಿಗೆ ತುಂಬಾ ಚೆನ್ನಾಗಿತ್ತು.

ಈ ಬಡಗಿಯ ಶಿಫಾರಸ್ಸಿನಿಂದ ಪ್ರೇರಿತನಾದ ನಗರದ ಶ್ರೀಮಂತ ವ್ಯಾಪಾರಿಯೊಬ್ಬ ಕಮ್ಮಾರನ ಬಳಿ ಬಂದು, ಒಂದು ವ್ಯಾಪಾರದ ಪ್ರಸ್ತಾಪವನ್ನು ಕಮ್ಮಾರನ

ಮುಂದಿಟ್ಟನು, ನಗರದಲ್ಲಿ ನಮ್ಮದಾದ ಲೋಹದ ಸಾಮಗ್ರಿಗಳ ವ್ಯಾಪಾರದ ಮಳಿಗೆ ಇದೆ. ಅಲ್ಲಿಂದ ರಾಜ್ಯಾದ್ಯಂತ ಸುತ್ತಿಗೆಗಳನ್ನು ಸರಬರಾಜು ಮಾಡುವ ಯೋಜನೆ ನನ್ನದಾಗಿದೆ. ಆದ್ದರಿಂದ ನೀವು ಒಳ್ಳೆಯ ಕಬ್ಬಿಣದ ಸುತ್ತಿಗೆಗಳನ್ನು ತಯಾರಿಸಿ ನೀಡಿದ್ದರೆ ನಿನಗೆ ಈಗಿನ ಬೆಲೆಯ ಒಂದೂವರೆ ಪಟ್ಟು ಬೆಲೆ ಕೊಡುತ್ತೇನೆ. ಆದರೆ ನೀನು ತಯಾರಿಸುವ ಎಲ್ಲಾ ಸುತ್ತಿಗೆಗಳನ್ನು ನನಗೇ ಮಾತ್ರವೇ ಮಾರಬೇಕು. ಕಬ್ಬಿಣದ ಸುತ್ತಿಗೆಗಳನ್ನು ಬೇರೆ ಯಾರಿಗೂ ಮಾರುವಂತಿಲ್ಲ ಎಂದನು, ಇದು ವಿಶೇಷವಾದ ನನ್ನ ಷರತ್ತು, ಆದರೆ ಇದರಿಂದ ನಿನಗೂ ವಿಶೇಷ ಪ್ರಯೋಜನವು ಇದೆ. ಈ ಬಗ್ಗೆ ಒಡಂಬಡಿಕೆಯ ಪತ್ರವನ್ನು ತಯಾರಿಸಿ, ನಾಳೆ ವಕೀಲರೊಂದಿಗೆ ಬರುತ್ತೇನೆ. ನೀನು ಈ ಷರತ್ತಿನ ಒಡಂಬಡಿಕೆಗೆ ನೀನು ಸಹಿ ಹಾಕಿದರೆ ಸರಿ, ತಿಂಗಳಿಗೆ ನಿನಗೆ ಕನಿಷ್ಠ ಪಕ್ಷ ಹತ್ತು ಸಾವಿರ ರೂ. ಮೌಲ್ಯದ ವ್ಯಾಪಾರವು ಗ್ಯಾರಂಟಿಯಾಗಿರುತ್ತದೆ ಎಂದು ನುಡಿದ, ಆಗ ಕಮ್ಮಾರನು ತುಸು ಚಿಂತಿಸಿ ಆಮೇಲೆ ಉತ್ತರಿಸಿದನು ನಿಮ್ಮ ವ್ಯಾಪಾರದ ಪ್ರಸ್ತಾಪ ಏನೋ ಚೆನ್ನಾಗಿದೆ. ಆದರೆ, ಇದೀಗ ನಮ್ಮ ಗ್ರಾಹಕರು ನನಗೆ ನೀಡುವ ಬೆಲೆಯಲ್ಲೇ ನನಗೆ ತುಂಬಾ ತೃಪ್ತಿ ಇದೆ.

ಈವರೆಗೆ ನನ್ನ ಮತ್ತು ಅವರ ನಡುವೆ ಆತ್ಮೀಯ ಸಂಬಂಧವು ತುಂಬಾ ಚೆನ್ನಾಗಿ ಇರುತ್ತದೆ. ನೀವು ನನಗೆ ಒಂದೂವರೆ ಪಟ್ಟು ಬೆಲೆ ಕೊಟ್ಟರೆ ನೀವು ಗಿರಾಕಿಗಳಿಂದ ದುಪ್ಪಟ್ಟು ಲಾಭ ಪಡೆದು ಶೋಷಣೆ ಮಾಡುವಷ್ಟು ಚಾಣಾಕ್ಷರಿದ್ದೀರಿ ಎಂದು ಕಮ್ಮಾರನು ಆ ಶ್ರೀಮಂತ ವ್ಯಾಪಾರಿಗೆ ತಿಳಿಸಿದ್ದನು. ಈ ಒಪ್ಪಂದಕ್ಕೆ ನಾನು ಸರ್ವಥಾ ಒಪ್ಪಲಾರೆ. ನನಗೆ ನಮ್ಮೂರಿನ ಜನ ತುಂಬಾ ಮುಖ್ಯ. ಲಾಭವು ತುಂಬಾ ಮುಖ್ಯವಾದುದಲ್ಲ. ಈ ಮಾತು ಕೇಳಿದ ನಗರದ ಶ್ರೀಮಂತ ವ್ಯಾಪಾರಿಯು ಜೋಲು ಮೋರೆಯೊಂದಿಗೆ ಹಿಂತಿರುಗಿ ನೋಡದಯೆ ಹಾಗೇಯೇ ಹೊರಟೇ ಹೋದನು.

ಸ್ವಂತ ಲಾಭಕ್ಕಿಂತಲೂ ಸಮಾಜದ ಜನಸಾಮಾನ್ಯರ ಸುಖ ದುಃಖಗಳ ಬಗ್ಗೆ, ಲಾಭ ನಷ್ಟಗಳ ಬಗ್ಗೆ ಇಂದು ಚಿಂತನೆ ಮಾಡುವವರೇ ನಿಜಕ್ಕೂ ಆದರ್ಶ ವ್ಯಕ್ತಿಗಳು, ಸ್ವಾರ್ಥಿಗಳೇ, ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಇಂತಹ ಉದಾರಿಗಳಾದ ಆದರ್ಶ ವ್ಯಕ್ತಿಗಳ ಸಂಖ್ಯೆ ಹೆಚ್ಚಾದಾಗ ಈ ಜಗತ್ತೇ ಸುಖಮಯವಾಗಲು ಸಾಧ್ಯ. ಇದು ಎಲ್ಲ ವಿಷಯಕ್ಕೂ ಅನ್ವಯಿಸುತ್ತದೆ. ನಮ್ಮಲ್ಲಿ ಏನೇ ಇದ್ದರೂ ಅದನ್ನು ಸ್ವೀಕರಿಸುವ ಹಾಗೂ ಮನ್ನಣೆ ನೀಡುವ ಜನ ಇರಬೇಕು. ಇಲ್ಲವಾದಲ್ಲಿ ನಮ್ಮಲ್ಲಿರುವ ಯಾವುದೇ ವಸ್ತುವಿಗೂ ಯಾವುದಕ್ಕೂ ಬೆಲೆ ಬರುವುದಿಲ್ಲ.